# ಗದ್ಯ–೨ ಸೀನಸೆಟ್ಟರು ನಮ್ಮ ಟೀಚರು

**ಮೌಲ್ಯ – 'ನಾವು ಪ್ರತಿನಿತ್ಯ ಶಾಲೆಯಿಂದ ಮಾತ್ರವಲ್ಲ ಸುತ್ತ ಮುತ್ತ ಪರಿಸರದಿಂದ ಪಾಠವನ್ನು ಕಲಿಯುತ್ತೇವೆ ಈ ಲೋಕವೇ ನಮ್ಮ ಗುರು.'**

**ಪದಗಳ ಅರ್ಥ:** ೧. ತೀವ್ರ – ಹೆಚ್ಚು ೨. ಲಪ್ಪಟೆ – ತಲೆಗೆ ಸುತ್ತಿದ ಬಟ್ಟೆ ೩. ಪಕ್ಕಾಗು – ಒಳಗಾಗು ೪. ಎಂತಾ ಮಗ – ಏನು ಮಗು ೫. ಚೆಂದ – ಚೆನ್ನಾಗಿ ೬. ಪಡಪೋಶಿ – ಕೆಲಸಕ್ಕೆ ಬಾರದ ೭. ಕರ್ಸಿದಾರೆ – ಕರೆಸಿದ್ದಾರೆ ೮. ತಳಹದಿ – ಬುನಾದಿ ೯. ಸಂವಾದಿಸು – ಮಾತನಾಡು, ಚರ್ಚೆಮಾಡು

೧೦. ಕಂಬಳಿಗೊಪ್ಪೆ – ಮಳೆಯಿಂದ ರಕ್ಷಿಸಿಕೊಳ್ಳಲು ಕಂಬಳಿಯಿಂದ ಮಾಡಿದ ಮುಸುಕು , ಗೊರಬು ೧೧. ತೆರವು – ಖಾಲಿ ೧೨. ನಾಟಿ – ಪೈರಿನ ಸಸಿಗಳನ್ನು ನೆಡುವುದು ೧೩. ನೀರಾವು – ನೀರಿನಲ್ಲಿ ಬದುಕುವ ಹಾವು ೧೪. ಹೋತು – ಹೋಯಿತು ೧೫. ಕದ – ಬಾಗಿಲು ೧೬. ಹೊಡೆ – ಕಾಳು ತುಂಬುವ ಮುನ್ನ ಕಾಣುವ ಪೈರಿನ ತುದಿ ೧೭. ತೆನೆ – ಕಾಳು ತುಂಬಿದ ಪೈರಿನ ತುದಿ

## ೨ ಕೃತಿಕಾರರ ಪರಿಚಯ ಶ್ರೀಮತಿ ವಿ. ಗಾಯತ್ರಿ

ಸೇವೆ – ಶಿಕ್ಷಣ ಇಲಾಖೆಯ 'ಮಹಿಳಾ ಸಮಖ್ಯ' ಮತ್ತು ನೀರಾವರಿ ಇಲಾಖೆಯ ಜಲ ಸಂವರ್ಧನೆ ಯೋಜನೆಗಳಲ್ಲಿ ಹಿರಿಯ ಅಧಿಕಾರಿಯಾಗಿ ಸೇವೆ.

ಕೃತಿಗಳು – ತುಂಗಾ, ತೊತ್ತೋಚಾನ್, ಕರ್ನಾಟಕದಲ್ಲಿ ಸಾವಯುವ ಪರಂಪರೆಯ ಕಥನಭಾಗ–೧ ಮತ್ತು ೨, ಪರಿಸರ ಶಿಕ್ಷಣದಲ್ಲಿ ಅಗತ್ಯ ಕಲಿಕೆಗಳು, ಎಳೆಯರಿಗಾಗಿ ಪರಿಸರ ಈ ಪಾಠವನ್ನು ವಿ.ಗಾಯತ್ರಿ ಯವರ 'ತುಂಗಾ' ಕೃತಿಯಿಂದ ಆರಿಸಲಾಗಿದೆ.

## ಪ್ರಶ್ನೆ ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧. ಮಾಂಡವಿ ಟೀಚರ್ ಯಾರನ್ನು ಪರಿಚಯಿಸಿದರು?
ಉತ್ತರ: ಮಾಂಡವಿ ಹೊಸ ಟೀಚರೆಂದು ಸೀನಸೆಟ್ಟರನ್ನು ಪರಿಚಯಿಸಿದರು.

೨. ಸೀನಸೆಟ್ಟರು ಜಮೀನಿನಲ್ಲಿ ಏನನ್ನು ಬೆಳೆಯುತ್ತಿದ್ದರು?
ಉತ್ತರ: ಸೀನಸೆಟ್ಟರು ಜಮೀನಿನಲ್ಲಿ ಸಾಸಿವೆ ಬೆಳೆಯನ್ನು ಬೆಳೆಯುತ್ತಿದ್ದರು.

೩. ಮಕ್ಕಳು ಏನು ಹಾಕಿಕೊಂಡು ಗದ್ದೆಗೆ ಇಳಿದರು?

ಉತ್ತರ: ಮಕ್ಕಳು ಕಂಬಳಿಗೊಪ್ಪೆ ಹಾಕಿಕೊಂಡು ಗದ್ದೆಗೆ ಇಳಿದರು.

೪. ಹಾಲಪ್ಪನ ಕಾಲನ್ನು ಏನು ಕಚ್ಚಿತು?

ಉತ್ತರ: ಹಾಲಪ್ಪನ ಕಾಲನ್ನು ನೀರಾವು ಕಚ್ಚಿತು.

೫. ಮನೆಯ ಅಟ್ಟ ಮಕ್ಕಳಿಗೆ ಯಾವ ಟವರ್ ಆಗಿ ಪರಿವರ್ತಿತಗೊಂಡಿತು? ಉತ್ತರ: ಮನೆಯ ಅಟ್ಟ ಮಕ್ಕಳಿಗೆ ಗದ್ದೆ ವೀಕ್ಷಣೆಯ ಟವರ್ ಆಗಿ ಪರಿವರ್ತಿತಗೊಂಡಿತ್ತು.

## ಪ್ರಶ್ನೆ ಆ) ಕೊಟ್ಟಿರುವ ಪ್ರಶ್ನೆಗಳಿಗೆ ಎರಡು- ಮೂರು ವಾಕ್ಯದಲ್ಲಿ ಉತ್ತರಿಸಿರಿ.

೧. ಸೀನಸೆಟ್ಟರ ವೇಷ ಹೇಗಿತ್ತು?

**ಉತ್ತರ:** ಸೀನಸೆಟ್ಟರು ತುಂಬಾ ಹಳೆಯದಾದ ಒಗೆದ ಪಂಚೆಯೊಂದನ್ನು ಸೊಂಟಕ್ಕೆ ಸುತ್ತಿ ಮೇಲಕ್ಕೆ ಎತ್ತಿ ಕಟ್ಟಿದ್ದರು. ಒಗೆದ ಚೌಕುಳಿ ಚೌಕುಳಿಯ ಅಂಗಿ, ಅದಕ್ಕಿಂತ ಹಳೆಯ ಟವಲಿನಿಂದ ತಲೆಗೆ ಲಪ್ಪಟೆ ಸುತ್ತಿಕೊಂಡಿದ್ದರು. ಈ ರೀತಿ ಸೀನಸೆಟ್ಟರ ವೇಷವಿತ್ತು.

೨. ದೊಡ್ಡ ತರಗತಿಗಳಿಗೆ ಹೋದಂತೆ ಮಕ್ಕಳು ಏನಾಗುತ್ತಾರೆಂದು ಮಾಂಡವಿಗೆ ಅನಿಸಿತ್ತು?

**ಉತ್ತರ:** ದೊಡ್ಡ ತರಗತಿಗಳಿಗೆ ಹೋದಂತೆ ಮಕ್ಕಳು ಶಾಲಾ ಶಿಕ್ಷಣಕ್ಕೂ ತಮ್ಮ ಮಣ್ಣಿನ ಬದುಕಿಗೂ ಯಾವುದೇ ಸಂಬಂಧವಿರದ ರೀತಿಯಲ್ಲಿ ಕೆಲಸಕ್ಕೆ ಬಾರದವರಾಗಿ ಆಗುತ್ತಾರೆಂದು ಮಾಂಡವಿಗೆ ಅನಿಸಿತ್ತು. ಏಕೆಂದರೆ ಇಂದಿನ ಶಾಲಾ ಶಿಕ್ಷಣ ನಿಜ ಬದುಕಿಗೆ ಯಾವುದೇ ಸಂಬಂಧವಿರದ ರೀತಿಯಲ್ಲಿ ಇದೆ.

೩. ಮಕ್ಕಳು ಸಸಿ ಕಿತ್ತ ಬಗೆ ಹೇಗಿತ್ತು?

**ಉತ್ತರ:** ಮೊದಮೊದಲು ಮಕ್ಕಳಿಗೆ ಹಿಡಿ ತುಂಬಾ ಸಸಿಗಳನ್ನು ಕೀಳುವುದು ಸುಲಭವಾಗಲಿಲ್ಲ. ಅನೇಕ ಸಸಿಗಳನ್ನು ಹಾಳು ಮಾಡಿದರು. ಹತ್ತಾರು ಬಾರಿ ಕಿತ್ತು ಕಿತ್ತು ಪ್ರಯತ್ನಿಸಿ ಅನಂತರ ಅವರಿಗೆ ಕೀಳುವುದು ಅಭ್ಯಾಸವಾಗಿ ವೇಗವೂ ಹಿಡಿಯಿತು. ಅವುಗಳನ್ನು ಸಣ್ಣ ಸಣ್ಣ ಕಟ್ಟುಗಳಲ್ಲಿ ಕಟ್ಟಿ ಕೆಸರು ಗದ್ದೆಯಲ್ಲಿ ಇಡುವುದನ್ನು 'ಟೀಚರು' ಕಲಿಸಿಕೊಟ್ಟರು.

೪. ಹಾಲಪ್ಪನಿಗೆ ಹಾವು ಕಚ್ಚಿದಾಗ ಸೀನಸೆಟ್ಟರು ಏನು ಹೇಳಿದರು?

**ಉತ್ತರ:** ಮಕ್ಕಳು ಗದ್ದೆಯಲ್ಲಿ ಕೆಲಸ ಮಾಡುವಾಗ ಒಂದು ಸಣ್ಣ ಹಾವು ಅವಸರದಿಂದ ಹಾಲಪ್ಪ ಎನ್ನುವವನ ಕಾಲನ್ನು ಕಚ್ಚಿಬಿಟ್ಟಿತು. ಅವನು ಹೌಹಾರಿ ಬಿದ್ದ. ತಕ್ಷಣ ಸೀನಸೆಟ್ಟರು ಅವನನ್ನು ಹಿಡಿದುಕೊಂಡರು. "ಹೆದರ್ಬೇಡಾ ಮಗಾ, ಎಂತಾ ಆಗಲ್ಲ. ಅದು ನೀರಾವು. ವಿಷದ ಹಾವಲ್ಲ ಒಂದು ಮೀನು ಕಚ್ಚಿದ್ರೆ ಹೆಂಗೋ ಅಷ್ಟೇ". ಎಂದು ತಿಳಿ ಹೇಳಿ ಸಮಾಧಾನಿಸಿದರು.

## ಪ್ರಶ್ನೆ ಇ ಕೆಳಗಿನ ವಾಕ್ಯಗಳನ್ನು ಸಂದರ್ಭ ಸಹಿತ ಸ್ಪಷ್ಟೀಕರಿಸಿ ಬರೆಯಿರಿ.

೧. 'ಹಂಗಾರೆ ಸೀನಸೆಟ್ರು ನಮ್ಮ ಟೀಚರು'

**ಆಕರ :** ಈ ವಾಕ್ಯವನ್ನು ವಿ.ಗಾಯತ್ರಿಯವರು ಬರೆದ 'ಸೀನಸೆಟ್ಟರು ನಮ್ಮ ಟೀಚರು' ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ :** ಮಾಂಡವಿಯು ಹೊಸ ಟೀಚರೆಂದು ಸೀನಸೆಟ್ಟರನ್ನು ಪರಿಚಯಿಸಿದಳು.ಆದರೆ ವಿದ್ಯಾರ್ಥಿನಿಯಾದ ತುಂಗಾಳಿಗೆ ಸೀನಸೆಟ್ಟರನ್ನು ಎಲ್ಲೋ ನೋಡಿದ ಹಾಗೆ ಅನಿಸುತ್ತಿತ್ತು. ನಂತರ ಸೀನಸೆಟ್ಟರು ತನ್ನ ದೂರದ ಸಂಬಂಧಿ ಎಂದು ತಿಳಿದಾಗ ತುಂಗಾ ತನ್ನ ಸ್ನೇಹಿತರಿಗೆ ಈ ಮೇಲಿನಂತೆ ಹೇಳಿದಳು.

**ಸ್ವಾರಸ್ಯ :** ಅಪರಿಚಿತ ವ್ಯಕ್ತಿ ಪರಿಚಿತ ವ್ಯಕ್ತಿ ಎಂದು ತಿಳಿದಾಗ ತುಂಗಾಳ ಉದ್ಗಾರದ ಮಾತು.

೨. 'ಮುಂಚೆ ಸಸಿಗಳನ್ನ ಕೀಳಾಣ'

**ಆಕರ :** ಈ ವಾಕ್ಯವನ್ನು ವಿ.ಗಾಯತ್ರಿಯವರು ಬರೆದ 'ಸೀನಸೆಟ್ಟರು ನಮ್ಮ ಟೀಚರು' ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ :** ಗದ್ದೆ ಕೆಲಸದಲ್ಲಿ ಸೀನಸೆಟ್ಟರು ಪರಿಣಿತ ವ್ಯಕ್ತಿಯಾಗಿದ್ದರು. ಅವರು ಗದ್ದೆ ಕೆಲಸದ ಬಗ್ಗೆ ವಿವರಿಸುವಾಗ ಸಸಿಗಳನ್ನು ನಾಟಿ ಮಾಡುವ ಕುರಿತು ಮಕ್ಕಳಿಗೆ ಹೇಳುವಾಗ ಈ ಮೇಲಿನಂತೆ ಹೇಳಿದರು.

**ಸ್ವಾರಸ್ಯ :** ಅನುಭವ ಇರುವಲ್ಲಿ ಅಮೃತ ಇರುತ್ತದೆ.

೩. 'ಇವತ್ತು ಪೂರಾ ಕಿತ್ತೇ ಹೋಗಾಣ'.

**ಆಕರ :** ಈ ವಾಕ್ಯವನ್ನು ವಿ.ಗಾಯತ್ರಿಯವರು ಬರೆದ 'ಸೀನಸೆಟ್ಟರು ನಮ್ಮ ಟೀಚರು' ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ :** ಸೀನಸೆಟ್ಟರು ವಿದ್ಯಾರ್ಥಿಗಳಿಗೆ ಗದ್ದೆಯಲ್ಲಿ ಸಸಿ ನೆಡುವುದರ ಬಗ್ಗೆ ತಿಳಿಸಿ ಕೊಟ್ಟರು. ಒಂದು ಗಂಟೆಯ ಕೆಲಸದ ನಂತರ ಸೀನಸೆಟ್ಟರು 'ಇವತ್ತಿಗೆ ಸಾಕು ಉಳಿದಿದ್ದು ನಾಳೆ' ಎಂದು ವಿದ್ಯಾರ್ಥಿಗಳಿಗೆ ಹೇಳಿದರು. ಆಗ ಸಂಭ್ರಮದಲ್ಲಿದ್ದ ವಿದ್ಯಾರ್ಥಿಗಳು ಈ ಮೇಲಿನಂತೆ ಹೇಳಿದರು.

**ಸ್ವಾರಸ್ಯ :** ಕೆಲಸದಲ್ಲಿನ ಉತ್ಸಾಹ ಆಯಾಸವನ್ನು ಕಡಿಮೆ ಮಾಡುತ್ತದೆ.

೪. 'ಕೈ ಎಲ್ಲಿಗ್ ಹೋತು'.

**ಆಕರ :** ಈ ವಾಕ್ಯವನ್ನು ವಿ.ಗಾಯತ್ರಿಯವರು ಬರೆದ 'ಸೀನಸೆಟ್ಟರು ನಮ್ಮ ಟೀಚರು' ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ :** ಸೀನಸೆಟ್ಟರು ವಿದ್ಯಾರ್ಥಿಗಳಿಗೆ ಗದ್ದೆಯಲ್ಲಿ ಕೆಲಸ ಮಾಡುವಾಗ ಹಾಡುತ್ತಾ ಕೆಲಸ ಮಾಡಿರಿ. ಎಂದು ಹೇಳಿದರು. ಅದರಂತೆ ಮಾರನೆಯ ದಿನ ಯಶೋಧಳು ಹೊಸ ಹಾಡನ್ನು ಹಾಡಿದಳು. ಆಗ ವಿದ್ಯಾರ್ಥಿಗಳು ಈ ಮೇಲಿನಂತೆ ಹೇಳಿದರು.

**ಸ್ವಾರಸ್ಯ :** ಗೀತ ಸಾಹಿತ್ಯವು ಮನಸ್ಸಿಗೆ ಮುದ ನೀಡುತ್ತದೆ.

**ಉಕ್ತಲೇಖನ**

| | | | | |
|---|---|---|---|---|
| ವಿದ್ಯಾರ್ಥಿ | ಸೀನಸೆಟ್ಟರು | ಅಮೃತ | ಟೀಚರು | ಸಾಹಿತ್ಯ |
| ಮಾಂಡವಿ | ಉತ್ಸಾಹ | ಸ್ನೇಹಿತ | ಹೇದರ್ಬೇಡಾ | ಪರಿವರ್ತಿತ |